Sri A. BHEEMAPPA NAIK.—Will Government give priority over others wherever there is technical sanction accorded ?

Sri T. SIDDALINGAIYA.—It is certainly so, subject to the condition that materials and funds are available.

ಶ್ರೀ ಕೆ. ಪ್ರಭಾಕರ್‌ರವರು (ನೆಲಮಂಗಲ—ಅನುಸೂಚಿತ ಜಾತಿಗಳು). —ತಾವು ಹೇಳಿದಂತೆ ಕರಂಟನ್ನು ಕೊಡಬೇಕಾದರೆ 10·9 ಆದಾಯವಿರಬೇಕೆಂದು ಪರತ್ತು ಎಷ್ಟು ದಿವಸದಿಂದ ಸಂಸ್ಥಾನದಲ್ಲಿ ಜಾರಿಯಲ್ಲಿದೆ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಈ ಪರತ್ತು ಆಗಾಗ್ಗೆ ಬದಲಾವಣೆಯಾಗುತ್ತಿದೆ. ಈಗ 2½ ವರ್ಷಗಳ ಹಿಂದೆ ಹೀಗೆ 10·9ರಷ್ಟು ಆದಾಯಯಿರಬೇಕೆಂದು ಗೊತ್ತುಮಾಡಿತ್ತು.

ಶ್ರೀ ಕೆ. ಪ್ರಭಾಕರ್‌ರವರು.—ಆ ಪರತ್ತು ಯಾರಿಯಾರಿಗೂ ಕರೆಂಟನ್ನು ಕೊಟ್ಟಿಲ್ಲವೇ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಆಗಲೇ ಹೇಳಿದ ಪ್ರಕಾರ, ಕೊಟ್ಟಿದೆ.

ಶ್ರೀ ಕೆ. ಪ್ರಭಾಕರ್‌ರವರು.—ಹಾಗಾದರೆ ಆ ಸ್ಪೆಷಲ್ ಕಾರಣಗಳೇನು ?

(No answer.)

Land Acquisition for construction of Houses to Harijans.

Q.—342. **Sri B. T. KEMPA RAJ** (Bangalore South-Scheduled Castes).—

Will the Government be pleased to state :—

how many land acquisition cases pertaining to the formation of sites for construction of houses to the Harijans in the State have been disposed of hitherto ?

A.—**Sri K. HANUMANTHAIYA** (Chief Minister).—

One thousand one hundred and thirty-five acquisition cases as detailed below were sanctioned for the formation of Harijan colonies and extensions in the State since the inception of the Depressed Class Amelioration Scheme.

Official year.		*No. of Acquisition cases sanctioned.*
1944-45	...	41
1945-46	...	120
1946-47	...	156
1947-48	...	157
1948-49	...	130
1949-50	...	184
1950-51	...	247
*1951-52	...	100

ಶ್ರೀ ಬಿ. ಟಿ. ಕೆಂಪರಾಜ್‌ರವರು.—ಈಗ ಸರ್ಕಾರದ ಮುಂದೆ ಎಷ್ಟು ಸ್ಯಾಂಕ್ಷ್ ಆದ ಕೇಸುಗಳು pending ನಲ್ಲವೆ ?

Sri K. HANUMANTHAIYA.—A number of them.

ಶ್ರೀ ಬಿ. ಟಿ. ಕೆಂಪರಾಜ್‌ರವರು.—ದಯವಿಟ್ಟು ಸಂಖ್ಯೆಯನ್ನು ಹೇಳುವುದಕ್ಕಾಗುತ್ತದೆಯೇ ?

Sri K. HANUMANTHAIYA.— Notice.

ಶ್ರೀ ಬಿ. ಟಿ. ಕೆಂಪರಾಜ್‌ರವರು.—ಒಂದು ಹಳ್ಳಿಯಲ್ಲಿ ಹರಿಜನರಿಗಿರತಕ್ಕ ಸ್ಥಳವನ್ನು ಅಕ್ಕ್ಯೂರ್ ಮಾಡದೆ ಊರಿನ ಆಚೆ ಇರತಕ್ಕ ಸ್ಥಳವನ್ನು ಅಕ್ಕ್ಯೂರ್‌ಮಾಡಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

Mr. SPEAKER.—The question is vague.

ಶ್ರೀ ಕೆ. ಲಕ್ಕಪ್ಪನವರು (ಚನ್ನರಾಯಪಟ್ಟಣ).—ಈ acquisition ಗೆ allot ಮಾಡಿದ್ದ ಮೊಬಲಗು ವರ್ಷ ವರ್ಷ lapse ಆಗುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೆ ?

Sri K. HANUMANTHAIYA.—I will look into it.

ಶ್ರೀ ಕೆ. ಪ್ರಭಾಕರ್‌ರವರು (ನೆಲಮಂಗಲ—ಅನುಸೂಚಿತ ಜಾತಿಗಳು).—ಈ ರೀತಿ ಅಕ್ಸಿಸಿರ್ಷ್ ಆದ ಮೇಲೆಯೂ ನಿವೇಶನಗಳನ್ನು ಕೊಡದಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

Sri K. HANUMANTHAIYA. —May be.

ಶ್ರೀ ಕೆ. ಪ್ರಭಾಕರ್‌ರವರು.—ಸರ್ಕಾರಿ ಹುಕುಮು ಆಖೈರಾಗಿ ಸಾದರಾದಮೇಲೆಯೂ ರಿಕಾರ್ಡ್‌ಗಳನ್ನು ವಾಪಸು ತರಿಸಿಕೊಳ್ಳುವುದಕ್ಕೆ ಕಾರಣವೇನು ?

Sri K. HANUMANTHAIYA.— Regarding this question I might state that there is a Central Policy Committee appointed by Government. All these difficulties will be thrashed out there and expeditious work done.

ಶ್ರೀ ಕೆ. ಪ್ರಭಾಕರ್‌ರವರು.—ಸ್ಕೆಟನ್ನು ಸ್ಯಾಧೀನಕ್ಕೆ ಕೊಟ್ಟಮೇಲೆ, ಆ ಜಮೀನಿನ ವಿಷಯದಲ್ಲಿ ಏನಾದರೂ ತಕರಾರುಗಳು ಬಂದರೆ ಅವುಗಳನ್ನು ಪರಿಹಾರಮಾಡುತ್ತೀರಾ ?

Sri K. HANUMANTHAIYA.—It is a suggestion Sir.

Bridge across Arkavathi.

Q.—20. **Sri S. KARIAPPA** (Virupakshapura).—

Will the Government be pleased to state :—

(*a*) whether there are representations requesting construction of a new bridge across the Arkavathi River near Bekuppe in Kanakapura Taluk ;

(*b*) the steps taken in the matter ?

* Figures for the year 1951-52 are furnished for a period of nine months from 1st April 1951 to 31st December 1951.

A.—**Sri Kadidal MANJAPPA** (Minister for Revenue and Public Works).—

(*a*) Yes.

(*b*) There is already one bridge constructed across the Arkavathi River near Kankanhalli on Bangalore-Mysore Road *via* Kankanhalli, only about 4 miles distant from the Bekuppe site.

Another deviation road is proposed from Kankanhalli to Kodihalli on the left bank of the Arkavathi River at an estimated cost of Rs. 1,11,400 and a budget provision of Rs. 20,000 is also made for this work.

In view of this, the construction of another bridge at Bekuppe, which would cost Rs. 3·00 lakhs, will not be necessary.

ಶ್ರೀ ಎಸ್. ಕರಿಯಪ್ಪನವರು.—ಬೇಕುಪ್ಪೆ ಹತ್ತಿರ ಹೊಳೆಯಿಂದಾಚೆ ಸುಮಾರು 20-30 ಗ್ರಾಮಗಳಿವೆ ಯಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪನವರು.- ಇರಬಹುದು.

ಶ್ರೀ ಎಸ್. ಕರಿಯಪ್ಪನವರು.—ಈ 20 ಗ್ರಾಮಗಳವರೂ ಸಹ ಮಳೆಗಾಲದಲ್ಲಿ ಬೆಂಗಳೂರಿಗಾಗಲೀ ಮೈಸೂರಿಗಾಗಲೀ ಹೋಗುವುದಕ್ಕೆ ಸಾಧ್ಯವಿಲ್ಲದೆ ಅಲ್ಲೇ ಇರಬೇಕಾಗಿರುವುದು ತಮ್ಮ ಗಮನಕ್ಕೆ ಬಂದಿದೆಯೆ?

ಶ್ರೀ ಕಡಿದಾಳ್ ಮಂಜಪ್ಪನವರು.—ಅಲ್ಲೇ ಇರುವುದು ಸರ್ಕಾರದವರ ಗಮನಕ್ಕೆ ಬಂದಿಲ್ಲ. ಬೇರೆ ಮಾರ್ಗಗಳಿಂದ ಹೋಗಿಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಶ್ರೀ ಎಸ್. ಕರಿಯಪ್ಪನವರು.—ಆ ಬೇರೆ ಮಾರ್ಗ ಯಾವುದು?

ಶ್ರೀ ಕಡಿದಾಳ್ ಮಂಜಪ್ಪನವರು.—ಬೇಕುಪ್ಪೆ ಹತ್ತಿರವೇ, ಮೈಸೂರು-ಬೆಂಗಳೂರು ರಸ್ತೆಯಲ್ಲಿ ಕಾನ ಕಾನಹಳ್ಳಿ ಸೇತುವೆಯಿದೆ. ಆ ಸೇತುವೆ ಮೂಲಕ ಹೋಗುತ್ತಾರೆಂದು ವರ್ತಮಾನ.

ಶ್ರೀ ಎಸ್. ಕರಿಯಪ್ಪನವರು.—ಆ ಸೇತುವೆಯ ಮೇಲೆ ಹಾಯಬೇಕಾದರೂ ಅದಕ್ಕೆ ಮೊದಲು ಹೊಳೆಯನ್ನು ದಾಟಿಕೊಂಡು ಬಂದರೆ ತಾನೆ ಸಾಧ್ಯ?

ಶ್ರೀ ಕಡಿದಾಳ್ ಮಂಜಪ್ಪನವರು.—ಕೋಡಿಹಳ್ಳಿಯಿಂದ ಈ ಸೇತುವೆಯವರೆಗೆ ಒಂದು ಕಾಲು ದಾರಿ ಇದೆ.

ಶ್ರೀ ಎಸ್. ಕರಿಯಪ್ಪನವರು.—ಆ ಕಾಲು ದಾರಿಗೆ ಹೋಗಲೂ ಮಧ್ಯೆ ಹೊಳೆ ಅಡ್ಡವಾಗಿಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪನವರು.—ಮತ್ತೊಂದು ಸೇತುವೆಯನ್ನು ಈ ಹೊಳೆಗೆ ಕಟ್ಟಬೇಕೆಂದು ಯೋಚನೆಯಲ್ಲಿದೆ.

ಶ್ರೀ ಎಸ್. ಕರಿಯಪ್ಪನವರು.-ಹೊಳೆಗೆ ಮತ್ತೊಂದು ಸೇತುವೆಯನ್ನು ಕಟ್ಟಬೇಕೆಂದಿದೆಯೆಂದು ಹೇಳಿದ್ದೀರಿ. ಅದಕ್ಕೆ ಎಷ್ಟು ರೂಪಾಯಿ ಖರ್ಚಾಗುತ್ತದೆ?

ಶ್ರೀ ಕಡಿದಾಳ್ ಮಂಜಪ್ಪನವರು.—ರಸ್ತೆ, ಸೇತುವೆ ಎಲ್ಲಾ ಸೇರಿ 1,11,400 ರೂಪಾಯಿಗಳಾಗುತ್ತೆ.

ಶ್ರೀ ಎಸ್. ಕರಿಯಪ್ಪನವರು.—ಈ 1,11,400 ರೂಪಾಯಿಗಳು ಅಲ್ಲಿ ಬರೀ ರಸ್ತೆ ಮಾಡಿಸಲಕ್ಕೇ ಬೇಕಾಗುತ್ತದೆಂಬುದು ಗೊತ್ತಿದೆಯೇ?

ಶ್ರೀ ಕಡಿದಾಳ್ ಮಂಜಪ್ಪನವರು.—ಸೇತುವೆ, ರಸ್ತೆ ಎರಡೂ ಸೇರಿ ಎಂದು ನಮಗೆ ತಿಳಿದುಬಂದಿದೆ.

ಶ್ರೀ ಎಸ್. ಕರಿಯಪ್ಪನವರು.—ತಾವು ಎಸ್ಟಿಮೇಟನ್ನು ನೋಡಿ ಹೇಳುತ್ತಿದ್ದೀರಾ?

ಶ್ರೀ ಕಡಿದಾಳ್ ಮಂಜಪ್ಪನವರು.—ಎಸ್ಟಿಮೇಟಿನ ವಿವರಗಳು ಇಲ್ಲಿಲ್ಲ.

ಶ್ರೀ ಎಸ್. ಕರಿಯಪ್ಪನವರು —ಬೆಂಗಳೂರಿಗೆ ಸರಬರಾಯಿಯಾಗತಕ್ಕ ಸೌದೆಯಲ್ಲಿ ಹೆಚ್ಚು ಭಾಗ ಈ 20 ಗ್ರಾಮಗಳಿಂದಲೇ ಬರಬೇಕಲ್ಲವೆ? ಏಕೆಂದರೆ ಕಾಡುಗಳು ಅಲ್ಲೇ ಇರುವುದು ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪನವರು.—ಕಾಡು ಬಯಲಾಗಬೇಕೆಂಬುದೇ ನಮ್ಮ ಆಶಯ. ಬೇಸಗೆ ಕಾಲದಲ್ಲಿ ಸುಲಿಸಾಗಿ ಹೋಗಿಬರುವುದಕ್ಕೆ ಅವಕಾಶವಿದೆಯೆಂದು ನಮ್ಮ ಗಮನಕ್ಕೆ ಬಂದಿದೆ.

ಶ್ರೀ ಎಸ್. ಕರಿಯಪ್ಪನವರು.—ಮಳೆಗಾಲದಲ್ಲಿ ತೊಂದರೆಯಾಗಬೇಕೆಂಬುದು ಸರ್ಕಾರದವರ ಉದ್ದೇಶವೇ?

ಶ್ರೀ ಕಡಿದಾಳ್ ಮಂಜಪ್ಪನವರು.—ಖಂಡಿತವಾಗಿಯೂ ಅಲ್ಲ. ಮಳೆಗಾಲದಲ್ಲಿಯೂ ಅನುಕೂಲ ಮಾಡಬೇಕೆಂದೇ ಒಂದು deviation ರಸ್ತೆಯನ್ನು ಮಾಡಿಸಿಕೊಡಬೇಕೆಂದು ಯೋಚನೆಯಲ್ಲಿದೆ.

Road from Sravanabelagola to Nagamangala.

Q.—257. **Sri K. LAKKAPPA** (Channarayapatna).—

Will the Government be pleased to state :—

(*a*) when the formation of road from Sravanabelagola to Nagamangala was started;

(*b*) how many more years they require to complete the same ;

(*c*) the amount spent so far;

(*d*) whether any amount has been provided this year to complete the the same ?

A.—**Sri Kadidal MANJAPPA** (Minister for Revenue and Public Works).—

(*a*) The work was started in March 1947.

(*b*) About two and a half years more.

(*c*) Rs. 35,400.

(*d*) Yes, Rs. 20,000.

ಶ್ರೀ ಕೆ. ಲಕ್ಕಪ್ಪನವರು.—ಶ್ರವಣಬೆಳಗೊಳ-ನಾಗಮಂಗಲ ರಸ್ತೆಗೆ ಸ್ಯಾಂಕ್ಷನ್ ಆಗಿರುವ ಮೊಬಲಗೆಷ್ಟು?

ಶ್ರೀ ಕಡಿದಾಳ್ ಮಂಜಪ್ಪನವರು.—33,000 ರೂಪಾಯಿಗಳು.

ಶ್ರೀ ಕೆ. ಲಕ್ಕಪ್ಪನವರು.—ಈ ರಸ್ತೆಯನ್ನು ಜರೂರಾಗಿ ಮುಗಿಸದೆ ಇದ್ದರೆ ಈಗ ಮಾಡಿರತಕ್ಕ ರಸ್ತೆ ಕೆಲಸ wash out ಆಗಿ ಹೋಗುತ್ತದೆಂದು ಹಿಂದಿನ ಹಣಕಾಸಿನ ಮಂತ್ರಿಗಳು note ಹಾಕಿದ್ದಾರೆ?